# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 1203-2022 ಸಿಡಬ್ಲೂ : 4 ಪಿಡಬ್ಲೂಃ 1

ಪ್ರಮಾಣವಚನ ಬೋಧಿಸಲಾಯಿತು ದಿಃ 28-01-2026

ಹೆಸರು : ನಾಗರಾಜು

ತಂದೆ ಹೆಸರು : ಜಂಬಣ್ಣ

ವಯಸ್ಸು : 45 ವರ್ಷ

ಉದ್ಯೋಗ : ಮುಖ್ಯ ಪೇದೆ , ಸಿ ಐ ಡಿ ಘಟಕ ಕಲಬುರಗಿ

ವಾಸಸ್ಥಳ : ಕಲಬುರಗಿ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು ಸನ್ 2019 ರಿಂದ 2023 ಸೇಡಂ ಪಿ ಎಸ್ ನಲ್ಲಿ ಮುಖ್ಯ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಅವಧಿಯಲ್ಲಿ ದಿಃ 23-03-2022 ರಂದು ರಾತ್ರಿ 11-45 ಸುಮಾರಿಗೆ ಇಬ್ಬರು ಪಂಚರಾದ ಚಾಸಾ 2 ಮತ್ತು 3 ರವರನ್ನು ಕರೆದುಕೊಂಡು ಬಂದು ನನ್ನನ್ನು ಹಾಗೂ ಚಾಸಾ 5 ರಿಂದ 7 ರವರಿಗೆ ಮತ್ತು ಪಂಚರಿಗೆ ಒಂದು ಮಾಹಿತಿ ಬಂದಿದೆ ದಾಳಿ ಮಾಡಬೇಕಾಗಿದೆ ಎಂದು ಹೇಳಿ ಕರೆದುಕೊಂಡು ಸೇಡಂ ಪಟ್ಟಣದಲ್ಲಿರುವ ಸಂಗ್ರಾಮ ಡಾಬಾ ಮುಂಭಾಗದಲ್ಲಿ ಹೋಗಿದ್ದಾಗ ಅಲ್ಲಿ ಇರುವ ಜನರು ನಮ್ಮನ್ನು ನೋಡಿ ಹೋಡಿ ಹೋಗಿರುತ್ತಾರೆ. ಚಾ ಸಾ 1 ರವರು ವಿಚಾರಣೆ ಮಾಡಿದಾಗ ಆರೋಪಿತನು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವ ಬಗ್ಗೆ ಖಚಿತವಾಯಿತು. ನಂತರ ಚಾ ಸಾ 1 ರವರು ಪಂಚರಾದ ಚಾ ಸಾ 2 ಮತ್ತು 3ರವರ ಸಮಕ್ಷಮ blunder spride ವಿಸ್ಕಿ, imperial blue wisky, original choice wisky, MC wisky, KF beer, ವಶಕ್ಕೆ ಪಡಿಸಿಕೊಂಡಿದ್ದರು. ಒಟ್ಟು ಮು ಮಾ ಅಂದಾಜು ಕಿಮ್ಮತ್ತು ರೂ.16000/- ಚಿಲ್ಲರೆ ಇತ್ತು. ಆದರೆ ಎಷ್ಟು quantity ಇತ್ತು ನನಗೆ ಗೊತ್ತಿಲ್ಲ. ನಂತರ ಸದರಿ ಮು ಮಾ ನೊಂದಿಗೆ ಕಛೇರಿಗೆ ಬಂದು ಮುಂದಿನ ಕ್ರಮಕ್ಕಾಗಿ ವರದಿಯನ್ನು ಸಲ್ಲಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲು:** ಮಾನ್ಯ ಸ.ಸ.ಅ ರವರಿಂದ:

Blenders pride 180 ML- 6 bottle, ಸದರಿ ಒಂದು Blenders pride ಅ. ಕಿ ರೂ.451/- ಇದ್ದು ಹೀಗೆ ಒಟ್ಟು 6 Blenders pride bottle ಅ. ಕಿ.2706/- ರೂ. Royal Challenge bottle 180 ML ಇದ್ದವು. Royal Challenge bottle ಅ. ಕಿ ರೂ.328/- ಇದ್ದು ಹೀಗೆ ಒಟ್ಟು 6 Royal Challenge bottle ಅ. ಕಿ.1968/- ರೂ. MCDowells Whisky 180ML 12 bottle ಇದ್ದವು. MC Dowells Whisky ಅ. ಕಿ ರೂ.198/- ಇದ್ದು ಹೀಗೆ ಒಟ್ಟು 12 Royal Challenge bottle ಅ. ಕಿ.2376/- ರೂ. Imperial Blue 180 ML -08 bottle ಇದ್ದವು. Imperial Blue ಅ. ಕಿ ರೂ.198/- ಇದ್ದು ಹೀಗೆ ಒಟ್ಟು 08 Royal Challenge bottle ಅ. ಕಿ.1584/- ರೂ. Officers Choice 180ML 10 pouch ಇದ್ದವು. Officers Choice ಅ. ಕಿ ರೂ.106/- ಇದ್ದು ಹೀಗೆ ಒಟ್ಟು 10 bottle ಅ. ಕಿ.1060/- ರೂ. Old Tavern 180 ML -06 pouch ಇದ್ದವು. Old Tavern ಅ. ಕಿ ರೂ.86/- ಇದ್ದು ಹೀಗೆ ಒಟ್ಟು 06 bottle ಅ. ಕಿ.516/- ರೂ. King fisher strong beer 650 ML-15 bottle ಇದ್ದವು. King fisher strong beer ಅ. ಕಿ ರೂ.155/- ಇದ್ದು ಹೀಗೆ ಒಟ್ಟು 15 bottle ಅ. ಕಿ.2325/- ರೂ. King fisher Premium Beer 650 ML-25 bottle ಇದ್ದವು. King fisher Premium Beer ಅ. ಕಿ ರೂ.150/- ಇದ್ದು ಹೀಗೆ ಒಟ್ಟು 25 bottle ಅ. ಕಿ.3750/- ರೂ. ಹೀಗೆ ಒಟ್ಟು 35290 ಲಿ. ಎಂ ಎಲ್ ಮಧ್ಯ ಜಪ್ತಿ ಮಾಡಿದ್ದು ಅದರ ಒಟ್ಟು ಅ. ಕಿ. 16285/- ರೂ ಗಳು ಆಗುತ್ತದೆ. ಮತ್ತು ಸದರಿ ಬಾಕ್ಸಗಳಿಂದ Blenders pride180 ML-1 bottle, Royal Challenge bottle 180 ML-01 bottle, MC Dowells Whisky 180 ML-1 bottle, Imperial blue 180ML- 01 bottle, Officers Choice 180 ML-01 pouch, Old Tavern 180 ML-01 pouch, King fisher strong beer 650 ML-01 bottle, King Fisher premium beer 650 ML-01 bottle ಗಳನ್ನು ತೆಗೆದುಕೊಂಡು ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಯಿತು ಎಂದರೆ ಸರಿ. ಸಾಕ್ಷಿಗೆ 8 ಬಾಟಲಿಗಳನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ಗುರುತಿಸಿರುವುದರಿಂದ ಅವುಗಳನ್ನು ಕ್ರಮವಾಗಿ ಮು ಮಾ -1 ರಿಂದ 8 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ** ಆರೋಪಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ

ನಾವು ಘಟನಾ ಸ್ಥಳಕ್ಕೆ ಸರ್ಕಾರಿ ಜೀಪು ಮುಖಾಂತರ ಹೋಗಿದ್ದೆವು. ಸದರಿ ಜೀಪು ನಂಬರು ನನಗೆ ಹೇಳಲು ಬರುವುದಿಲ್ಲ. ಘಟನಾ ಸ್ಥಳಕ್ಕೆ ಹೋದ ತಕ್ಷಣ ನಾವು ದೂರದಿಂದ ನೋಡಿದೆವು. ನಂತರ ನಾವು ಎಲ್ಲಾರೂ ದಾಳಿ ಮಾಡಿ ಅವರಿಗೆ ಹಿಡಿಯಲು ಪ್ರಯತ್ನಿಸಿದೆವು. ಆಗ ಆರೋಪಿತನು ಅಲ್ಲಿಂದ ಹೋಡಿ ಹೋಗಿರುತ್ತಾನೆ. ನಾವು ಅವರಿಗೆ ಏನೂ ಬೆನ್ನು ಹತ್ತಿಲ್ಲ. ನಾವು ಯಾವುದೇ ರೀತಿಯ ಹಿಡಿಯಲು ಪ್ರಯತ್ನಿಸಿಲ್ಲ ಹಾಗೂ ಘಟನಾ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಿಲ್ಲ. ಆರೋಪಿತನು ಸಂಗ್ರಾಮ ಡಾಬಾದ ಯಾವ ದಿಕ್ಕಿಗೆ ಕುಳಿತುಕೊಂಡು ಮಾರಾಟ ಮಾಡುತ್ತಿದ್ದನು ಅಂತಾ ಹೆಳಲು ಬರುವುದಿಲ್ಲ. ಆದರೆ ಸದರಿ ಡಾಬಾದ ಮುಂಭಾಗದಲ್ಲಿ ಕುಳಿತುಕೊಂಡು ಮಾರಾಟ ಮಾಡುತ್ತಿದ್ದನು. ನನ್ನ ಹೇಳಿಕೆಯಲ್ಲಿ ಸಂಗ್ರಾಮದ ಡಾಬಾದ ಬಾಜು ಕುಳಿತು ಮಾರಾಟ ಮಾಡುತ್ತಿದ್ದೆನೆಂದು ಬರೆದಿರುತ್ತೇನೆ ಎಂದರೆ ಸಯಿಲ್ಲ. ಘಟನಾ ಸ್ಥಳದ ಪಕ್ಕದಲ್ಲಿ ಪೆಟ್ರೋಲ್ ಪಂಪ್ ಇದೆ ಎಂದರೆ ಸರಿ. ಪೆಟ್ರೋಲ್ ಪಂಪ್ ಲ್ಲಿ ಇರುವ ದೊಡ್ಡ ಕಂಬದ ಲೈಟಿನ ಬೆಳಕು ಎಲ್ಲಾ ಕಡೆ ಬೀಳುತ್ತದೆ ಎಂದರೆ ಸಾಕ್ಷಿಯು ಆಕಡೆ ಬೀಳುತ್ತದೆ ಈ ಕಡೆ ಬೀಳುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಕಂಬದ ಲೈಟು ಎಲ್ಲಾ ಕಡೆ ಬೀಳುತ್ತದೆ ಎಂದರೆ ಸರಿಯಿಲ್ಲ. ಅದೇ ರೀತಿ ಘಟನಾ ಸ್ಥಳದ ಪಕ್ಕದಲ್ಲಿ  ಗೋದಾಮು ಇರುತ್ತದೆ ಎಂದರೆ ಸರಿ .ಅಲ್ಲಿಯೂ ಸಹ ಲೈಟ್ ಇದೆ ಎಂದರೆ ಸರಿಯಿಲ್ಲ. ಅದೇ ರೀತಿ ಘಟನಾ ಸ್ಥಳದಲ್ಲಿ ಕಲಬುರಗಿ- ಸೇಡಂ ಮುಖ್ಯ ರಸ್ತೆ ಇರುವುದರಿಂದ ಸಾಕಷ್ಟು ವಾಹನಗಳು ಹೋಗುವುದು ಬರುವುದು ಮಾಡುತ್ತಾರೆ  ಎಂದರೆ ಸಾಕ್ಷಿಯು ಆಗ ಸಮಯ 11-30 ಆಗಿರುವುದರಿಂದ ಜಾಸ್ತಿ ವಾಹನಗಳು ಇರುವುದಿಲ್ಲ ಎಂದು ನುಡಿಯುತ್ತಾರೆ. ನಾವು ದಾಳಿ ಮಾಡಿದಾಗ ಆರೋಪಿತನು ಯಾವರಿಗೂ ಸಹ ಮಧ್ಯ ಮಾರಾಟ ಮಾಡುತ್ತಿರಲಿಲ್ಲ ಯಾಕೆಂದರೆ ಅಲ್ಲಿ ಯಾರು ಗ್ರಾಹಕರು ಇರಲಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿತನು ಮಧ್ಯವನ್ನು ಸಂಗ್ರಹಿಸಿ ಮಾರಾಟ ಮಾಡಲು ಕುಳಿತಿದ್ದನು. ಪಂಚನಾಮೆಗೆ ಸಹಿಯನ್ನು ಸ್ಥಳದಲ್ಲಿಯೇ ಪಡೆದುಕೊಂಡಿದ್ದೆನು. ಸದರಿ ಪಂಚನಾಮೆಯನ್ನು ಯಾರು ಬೆರಳಚ್ಚು ಮಾಡಿದ್ದಾರೆ ಎಂದರೆ ಸಾಕ್ಷಿಯು ಕೈಯಿಂದ ಬೆರೆದಿದ್ದಾರೆ ಎಂದು ನುಡಿಯುತ್ತಾರೆ. ಮು ಮಾ ಗೂ ಹಾಗೂ ಆರೋಪಿತರಿಗೂ ಯಾವುದೇ ರೀತಿಯ ಸಂಬಂದ ಇಲ್ಲ ಎಂದರೆ ಸರಿಯಿಲ್ಲ. ಮು ಮಾ 1 ರಿಂದ 8 ಸಾಮಾನ್ಯವಾಗಿ ಎಲ್ಲಾ ಕಡೆ ಲಬ್ಯ ಇರುತ್ತವೆ ಎಂದರೆ ಸರಿ .ಸಾಕ್ಷಿಯು ಮುಂದುವರೆದು ಆದರೆ ಇದೆ ಮಧ್ಯವಾನ್ನು ಮಾರಾಟಮಾಡುತ್ತಿದ್ದನು ಎಂದು ನುಡಿಯುತ್ತಾನೆ. ನಾವು ಎಲ್ಲಾ ಮಧ್ಯದಿಂದ ಒಂದು ಒಂದು

ಕಂಪನಿಯ ಒಂದು ಒಂದು ಬಾಟಲಿನ್ನು ರಾಸಾಯನಿಕಪರೀಕ್ಷ ಗಾಗಿ ಮಾದರಿಯನ್ನು ತೆಗೆದಿರುತ್ತೇನೆ. ಈ ಬಗ್ಗೆಸುಳುಳ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.ನಾನು ನಮ್ಮ ಮೇಲಧಿಕಾರಿಗಳ ಮಾತನ್ನು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

**(ಮರುವಿಚಾರಣೆ ಇಲ್ಲ)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿ ಇದೆ**

**ಪ್ರ. ದ. ನ್ಯಾ ದಂ. ಸೇಡಂ.**